ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 10-04-1991.

# *ಹೃದಯ ಸಿಂಹಾಸನಾಧಿಕಾರಿ ಮತ್ತು ವಿಶ್ವ ಸಿಂಹಾಸನಾಧಿಕಾರಿಯಾಗಲು ಸುಖ ಕೊಡಿ ಮತ್ತು ಸುಖ ಪಡೆಯಿರಿ.*

(दिल तख्तनशीन और विश्व तख्तनशीन बनने के लिए सुख दो और सुख लो)

**ನಿರಾಕಾರನು, ಸರ್ವಶಕ್ತಿವಂತನೂ ಆದ ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

*ಅವ್ಯಕ್ತ ಬಾಪ್‌ದಾದಾ ತನ್ನ ಹೃದಯ ಸಿಂಹಾಸನಾಧಿಕಾರಿ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.*

ಇಂದು ವಿಶ್ವದ ಮಾಲಿಕ, ತಮ್ಮ ಬಾಲಕ ಸೋ ಮಾಲಿಕ ಮಕ್ಕಳನ್ನು ನೋಡುತಿರುವರು. ಎಲ್ಲಾ ಮಕ್ಕಳು ಈ ಸಮಯದಲ್ಲಿ ಸ್ವಯಂನ ಮಾಲೀಕ ಆಗಿರುವರು ಮತ್ತು ಅನೇಕ ಜನ್ಮಗಳಲ್ಲಿ ವಿಶ್ವದ ಮಾಲೀಕರೂ ಆಗಿರುವರು. ಪರಮಾತ್ಮನ ಮಕ್ಕಳು-ಬಾಲಕ ಸೋ ಮಾಲಿಕ ಆಗಿಬಿಡುತ್ತೀರಿ. ಬ್ರಾಹ್ಮಣ ಅತ್ಮರು ಅರ್ಥಾತ್ ಮಾಲಿಕ ಅತ್ಮರು, ಈ ಸಮಯದಲ್ಲಿ ಸರ್ವ ಕರ್ಮೇಂದ್ರಿಯಗಳಿಗೆ ಮಾಲಿಕ ಆಗಿರುವಿರಿ, ಅಧೀನ ಆತ್ಮರು ಅಲ್ಲ. ಅಧಿಕಾರಿ ಅರ್ಥಾತ್ ಮಾಲಿಕ ಆಗಿರುವಿರಿ. ಕರ್ಮೇಂದ್ರಿಯಗಳಿಗೆ ವಶೀಭೂತರಲ್ಲ. ಆದ್ದರಿಂದ ಬಾಲಕ ಸೋ ಮಾಲಿಕ ಆಗಿರುವಿರಿ. ಬಾಲಕತನದ ಈಶ್ವರೀಯ ನಶೆಯ ಅನುಭವ ಮಾಡುತ್ತೀರಿ ಮತ್ತು ಸ್ವರಾಜ್ಯದ ಮಾಲಿಕತನದ ಅನುಭವವನ್ನೂ ಸಹ ಮಾಡುತ್ತೀರಿ. ಡಬಲ್ ನಶೆ ಇದೆ. ನಶೆಯ ಚಿಹ್ನೆ ಆಗಿದೆ ಅವಿನಾಶಿ ಅತ್ಮೀಕ ಖುಷಿ. ಸದಾ ನಿಮ್ಮನ್ನು ನೀವು ವಿಶ್ವದಲ್ಲಿ ಸೌಭಾಗ್ಯಶಾಲಿ ಆತ್ಮ ಎಂದು ತಿಳಿದುಕೊಳ್ಳುತ್ತೀರಾ? ವಾಹ್ ನನ್ನ ಶ್ರೇಷ್ಠ ಭಾಗ್ಯ ಅರ್ಥಾತ್ ಶ್ರೇಷ್ಠ ಅದೃಷ್ಟ ಸೌಭಾಗ್ಯಶಾಲಿಗಳು ಎಂದು ಭಾವಿಸುತ್ತಿದ್ದೀರಾ? ಮತ್ತು ಸದಾ ಖುಷಿಯ ಔಷಧಿಯನ್ನು ತಿನ್ನುತ್ತೀರಿ ಮತ್ತು ತಿನ್ನಿಸುತ್ತೀರಿ. ಜೊತೆ-ಜೊತೆಯಲ್ಲಿ ಸದಾ ಖುಷಿಯ ಉಯ್ಯಾಲೆಯಲ್ಲಿ ಆಡುತ್ತಿರುತ್ತೀರಿ. ಅನ್ಯರಿಗೂ ಖುಷಿಯ ಮಹಾದಾನವನ್ನು ಕೊಟ್ಟು ಸೌಭಾಗ್ಯಶಾಲಿಯನ್ನಾಗಿ ಮಾಡುತ್ತೀರಿ ಇಂತಹ ಅಮೂಲ್ಯ ವಜ್ರ ಸಮಾನ ಜೀವನ ಮಾಡಿಕೊಳ್ಳುವವರಾಗಿರುವಿರಿ. ಆಗಿರುವಿರೊ

ಅಥವಾ ಇನ್ನೂ ಆಗಬೇಕಾಗಿದೆಯೋ? ಬ್ರಾಹ್ಮಣ ಜೀವನದ ಅರ್ಥವೇ ಆಗಿದೆ ಖುಷಿಯಲ್ಲಿ ಇರುವುದು, ಖುಷಿಯ ಔಷಧಿಯನ್ನು ತಿನ್ನುವುದು ಮತ್ತು ಖುಷಿಯ ಉಯ್ಯಾಲೆಯಲ್ಲಿ ತೂಗುವುದು. ಇಂತಹ ಬ್ರಾಹ್ಮಣರಾಗಿರುವಿರಿ ಅಲ್ಲವೇ? ಖುಷಿಯ ಹೊರತಾಗಿ ಬೇರೆ ಜೀವನದಲ್ಲಿ ಇನ್ನೇನಿದೆ! ಜೀವನವೇ ಖುಷಿ ಆಗಿದೆ. ಖುಷಿ ಇಲ್ಲವಾದರೆ ಬ್ರಾಹ್ಮಣ ಜೀವನವೇ ಇಲ್ಲ. ಖುಷಿಯಲ್ಲಿರುವುದೇ ಜೀವನವಾಗಿದೆ.

ಇಂದು ಬಾಪ್‌ದಾದಾ ಸರ್ವ ಮಕ್ಕಳ ಪುಣ್ಯದ ಖಾತೆಯನ್ನು ನೋಡುತ್ತಿದ್ದರು. ಏಕೆಂದರೆ ನೀವೆಲ್ಲರೂ ಪುಣ್ಯಾತ್ಮರಾಗಿರುವಿರಿ. ಪುಣ್ಯದ ಖಾತೆಯನ್ನು ಅನೇಕ ಜನ್ಮಗಳವರೆಗೆ ಜಮಾ ಮಾಡಿಕೊಳ್ಳುತ್ತಿರುವಿರಿ. ಇಡೀ ದಿನದಲ್ಲಿ ಎಷ್ಟು ಪುಣ್ಯವನ್ನು ಜಮಾ ಮಾಡಿಕೊಂಡಿದ್ದೀರಿ? ಇದನ್ನು ಸ್ವಯಂ ಸಹ ಚೆಕ್ ಮಾಡಿಕೊಳ್ಳಲು ಸಾಧ್ಯವಿದೆಯಲ್ಲವೇ. **ಒಂದಾಗಿದೆ ದಾನ ಮಾಡುವುದು ಮತ್ತು ಇನ್ನೊಂದಾಗಿದೆ ಪುಣ್ಯ ಮಾಡುವುದು. ದಾನಕ್ಕಿಂತಲೂ ಪುಣ್ಯದ ಮಹತ್ವ ಹೆಚ್ಚಿದೆ. ಪುಣ್ಯದ ಕರ್ಮ ನಿಸ್ವಾರ್ಥ ಸೇವಾಭಾವದ ಕರ್ಮ ಆಗಿದೆ. ಪುಣ್ಯ ಕರ್ಮ ತೋರಿಕೆಗೆ ಇರುವುದಿಲ್ಲ ಆದರೆ ಹೃತ್ ಪೂರ್ವಕ ಆಗಿರುತ್ತದೆ. ದಾನ ಮಾಡುವುದು ಹೃತ್ ಪೂರ್ವಕವಾಗಿಯೂ ಇರುತ್ತದೆ ಮತ್ತು ತೋರಿಕೆಗಾಗಿಯೂ ಮಾಡಬಹುದು. ಪುಣ್ಯ ಕರ್ಮ ಅರ್ಥಾತ್ ಅವಶ್ಯಕತೆಯ ಸಮಯದಲ್ಲಿ ಯಾರಿಗಾದರೂ ಸಹಯೋಗಿಯಾಗುವುದು. ಪುಣ್ಯಕರ್ಮ ಮಾಡುವ ಆತ್ಮಕ್ಕೆ ಅನೇಕ ಅತ್ಮರ ಹೃದಯ ಪೂರ್ವಕವಾದ ಆಶೀರ್ವಾದಗಳು ಪ್ರಾಪ್ತಿಯಾಗುತ್ತವೆ. ಕೇವಲ ಮುಖದಿಂದ ಧನ್ಯವಾದ ಅಥವಾ ವಂದನೆ ಎಂದು ಹೇಳುವುದಲ್ಲ. ಹೇಳುತ್ತಾರೆ ಸ ಆದರೆ ಹೃದಯಪೂರ್ವಕವಾದ ಆಶೀರ್ವಾದಗಳು ಗುಪ್ತವಾಗಿ ಜಮಾ ಆಗುತ್ತಿರುತ್ತದೆ. ಪುಣ್ಯಾತ್ಮ ಪರಮಾತ್ಮನ ಆಶೀರ್ವಾದ, ಅತ್ಮರ ಆಶೀರ್ವಾದಗಳ ಪ್ರತ್ಯಕ್ಷ ಫಲದಿಂದ ಭರ್ ಪೂರ್ ಆಗಿರುತ್ತಾರೆ. ಪುಣ್ಯಾತ್ಮರ ದೃಷ್ಟಿ, ವೃತ್ತಿ ಅನ್ಯರಿಗೂ ಆಶೀರ್ವಾದಗಳನ್ನು ಅನುಭವ ಮಾಡಿಸುತ್ತದೆ. ಪುಣ್ಯಾತ್ಮರ ಚೆಹರೆಯಲ್ಲಿ ಸದಾ ಪ್ರಸನ್ನತೆ, ಸಂತುಷ್ಟತೆಯ ಹೊಳಪು ಕಂಡು ಬರುತ್ತದೆ. ಪುಣ್ಯಾತ್ಮ ಪ್ರಾಪ್ತಿ ಆಗಿರುವ ಫಲದ ಕಾರಣದಿಂದಾಗಿ ಅಭಿಮಾನ ಮತ್ತು ಅಪಮಾನದಿಂದ ದೂರ ಇರುತ್ತಾರೆ. ಏಕೆಂದರೆ ಅವರು ಭರ್ ಪೂರ್ ಚಕ್ರವರ್ತಿಯಾಗಿರುತ್ತಾನೆ. ಪ್ರಣ್ಯಾತ್ಮ ಪುಣ್ಯದ ಶಕ್ತಿಯ ಮೂಲಕ ಸ್ವಯಂನ ಪ್ರತಿ ಸಂಕಲ್ಪವನ್ನು ಎಲ್ಲಾ ಸಮಯದ ಹಲಚಲ್‌ನ್ನು ಪ್ರತಿ ಕರ್ಮವನ್ನು ಸಫಲ ಮಾಡುವಂತಹವರಾಗಿರುತ್ತಾರೆ. ಪುಣ್ಯದ ಖಾತೆ ಜಮಾ ಆಗುತ್ತದೆ. ಜಮಾ ಆಗಿರುವುದರ ಚಿನ್ಹೆ ಆಗಿದೆ – ವ್ಯರ್ಥದ ಸಮಾಪ್ತಿ. ಇಂತಹ ಪ್ರಣ್ಯಾತ್ಮ ವಿಶ್ವ ರಾಜ್ಯ ಸಿಂಹಾಸನದಲ್ಲಿ ಆಸೀನರಾಗುತ್ತಾರೆ.** ಆದ್ದರಿಂದ ನಿಮ್ಮ ಖಾತೆಯನ್ನು ಚೆಕ್ ಮಾಡಿಕೊಳ್ಳಿ ಎಲ್ಲಿಯವರೆಗೆ ಪ್ರಣ್ಯಾತ್ಮ ಆಗಿದ್ದೇನೆ ಎಲ್ಲರೂ ಪ್ರಣಾತ್ಯ ಆಗಿರುವಿರಾ ಎಂದು ಕೇಳಿದರೆ ಎಲ್ಲರೂ ಹೌದು ಎಂದು ಹೇಳುತ್ತೀರಿ ಎಲ್ಲರೂ ಪುಣ್ಯಾತ್ಮರೇ ಆಗಿರುವಿರಿ. ಆದರೆ ನಂಬರವಾರ್ ಆಗಿರುವಿರೊ ಅಥವಾ ಎಲ್ಲರೂ ನಂಬರ್ ಒನ್ ಆಗಿರುವಿರೋ ನಂಬರ್ ವಾರ್ ಅಲ್ಲವೇ. ಸತ್ಯಯುಗ-ತ್ರೇತಾದ ವಿಶ್ವದ ಸಿಂಹಾಸನದ ಮೇಲೆ ಎಷ್ಟು ಜನ ಮಕ್ಕಳು ಕುಳಿತುಕೊಳ್ಳುವರು" ಎಲ್ಲರೂ ಒಟ್ಟಿಗೆ ಕುಳಿತುಕೊಳ್ಳುವಿರಾ? ಅಂದ ಮೇಲೆ ನಂಬರವಾರ್ ಅಲ್ಲವೇ, ನಂಬರ್ ಏಕೆ ಆಗುತ್ತದೆ ಕಾರಣ? ಮಕ್ಕಳ ಒಂದು ವಿಶೇಷ ಮಾತನ್ನು ಬಾಪ್‌ದಾದಾ ಚೆಕ್ ಮಾಡಿದರು. ಮತ್ತು ಅದೇ ಮಾತು ನಂಬರ್ ಒನ್ ಆಗುವುದರಲ್ಲಿ ಅಡಚಣೆ ಉಂಟು ಮಾಡುತ್ತದೆ.

ಈಗ ತಪಸ್ಯಾ ವರ್ಷದಲ್ಲಿ ಎಲ್ಲರ ಲಕ್ಷ್ಯ ಸಂಪೂರ್ಣ ಆಗುವುದಾಗಿದೆಯೋ ಅಥವಾ ನಂಬರ್ ವಾರ್ ಆಗುವುದಾಗಿದೆಯೋ? ಸಂಪೂರ್ಣ ಆಗಬೇಕಲ್ಲವೇ. ನೀವೆಲ್ಲರೂ ಒಂದು ಸ್ಲೋಗನ್ ಹೇಳುತ್ತೀರಿ ಮತ್ತು ಬರೆದು ಸಹ ಹಾಕುತ್ತೀರಿ. ಅದಾಗಿದೆ - **"ಸುಖವನ್ನು ಕೊಡಿ ಮತ್ತು ಸುಖವನ್ನೆ ಪಡೆಯಿರಿ. ದುಃಖ ಕೊಡಬೇಡಿ- ದುಃಖವನ್ನು ತೆಗೆದುಕೊಳ್ಳಬೇಡಿ." ಈ ಸ್ಲೋಗನ್ ಪಕ್ಕಾ ಆಗಿದೆಯೇ ಹಾಗಾದರೆ ಪರಿಣಾಮದಲ್ಲಿ ನೋಡಿದ್ದೇನು? ದುಃಖ ಕೊಡಬೇಡಿ - ಇದರ ಕಡೆ ಹೆಚ್ಚಿನವರ ಗಮನ ಇದೆ. ಆದರೆ ಅರ್ಧ ಸೋಗನ್ ಸರಿಯಾಗಿದೆ. ಕೊಡುವುದರ ಬಗ್ಗೆ ವಿಚಾರ ಮಾಡುತ್ತೀರಿ, ಕೊಡಬಾರದು ಆದರೆ ತೆಗೆದುಕೊಳ್ಳುವಾಗ ಹೇಳುತ್ತೀರಿ ಅವರು ಕೊಟ್ಟರು ಆದ್ದರಿಂದ ಹೀಗಾಯಿತು. ಇವರು ಹೀಗೆ ಹೇಳಿದರು. ಅದರಿಂದ ಹೀಗಾಯಿತು. ಈ ರೀತಿ ನಿರ್ಣಯ ಕೊಡುತ್ತೀರಿ ಅಲ್ಲವೆ. ನಿಮ್ಮ ವಕೀಲ ನೀವೇ ಆಗಿ ನಿಮ್ಮ ಕೇಸಿನಲ್ಲಿ ಹೀಗೆ ಹೇಳುತ್ತೀರಿ. ಆದ್ದರಿಂದ ಅರ್ಧ ಸ್ಲೋಗನ್ ಕಡೆ ಗಮನ ಸರಿಯಾಗಿದೆ, ಮತ್ತು ಅದನ್ನು ಅಂಡರ್‌ಲೈನ್ ಕೂಡಾ ಮಾಡಿಕೊಳ್ಳಬೇಕು. ಆದರೂ ಅರ್ಧ ಸ್ಲೋಗನ್ ಕಡೆ ಗಮನ ಇದೆ ಆದರೆ ಇನ್ನರ್ಧ ಸ್ಲೋಗನ್ ಏನಿದೆ ಅದರ**

**ಕಡೆ ಹೆಸರಿಗೆ ಮಾತ್ರ ಗಮನ ಇದೆ. ಅವರು ಕೊಟ್ಟರು ಆದರೆ ನೀವು ಏಕೆ ತೆಗೆದಿಕೊಂಡಿರಿ? ತೆಗೆದುಕೊಳ್ಳಲು ಯಾರು ಹೇಳಿದರು? ದುಃಖ ತೆಗೆದುಕೊಳ್ಳಿ, ದುಃಖದಿಂದ ಜೋಳಿಗೆ ತುಂಬಿಕೊಳ್ಳಿ ಎನ್ನುವುದು ತಂದೆಯ ಶ್ರೀಮತ ಆಗಿದೆ ಏನು? ಆ ದುಃಖ ಕೊಡಬೇಡಿ-ದುಃಖ ತೆಗೆದುಕೊಳ್ಳಬೇಡಿ. ಆಗ ಪ್ರಣ್ಯಾತ್ಮ ಆಗುವಿರಿ, ತಪಸ್ವಿ ಆಗುವಿರಿ, ತಪಸ್ವಿ ಆರ್ಥಾತ್ ಪರಿವರ್ತನೆ ಆದ್ದರಿಂದ ಅವರ ದುಃಖವನ್ನು ನೀವು ಸುಖದ ರೂಪದಲ್ಲಿ ಸ್ವಿಕಾರ ಮಾಡಿರಿ. ಪರಿವರ್ತನೆ ಮಾಡಿಕೊಳ್ಳಿ ಆಗ ತಪಸ್ವೀ ಎಂದು ಹೇಳಲು ಸಾಧ್ಯ.** ಗ್ಲಾನಿಯನ್ನು ಪ್ರಶಂಸೆ ಎಂದು ತಿಳಿಯಿರಿ ಆಗ ಪ್ರಣ್ಯಾತ್ಯ ಎಂದು ಹೇಳಲು ಸಾಧ್ಯ. ಜಗದಂಬಾ ತಾಯಿ ಸದಾ ಇದೇ ಪಾಠವನ್ನು ಮಕ್ಕಳಿಗೆ ಪಕ್ಕಾ ಮಾಡಿಸಿದರು ಏನೆಂದರೆ ಗ್ಲಾನಿ ಮಾಡುವ ಅಥವಾ ದುಃಖ ಕೊಡುವ ಆತ್ಮಕ್ಕೂ ಸಹ ದಯಾಹೃದಯೀ, ದಯಾ ದೃಷ್ಟಿಯಿಂದ ನೋಡಿ ಗ್ಲಾನಿಯ ದೃಷ್ಟಿಯಿಂದ ಅಲ್ಲ. ಗ್ಲಾನಿ ಮಾಡುವವರನ್ನು ಹೃದಯದಿಂದ ಆಲಿಂಗನ ಮಾಡಿಕೊಳ್ಳಿ. ಹೊರಗಿನಿಂದ ಅಲ್ಲ. ಆದರೆ ಮನಸ್ಸಿನಿಂದ ಹೀಗೆ ಪುಣ್ಯದ ಖಾತೆ ಜಮಾ ಆಗುವುದರಲ್ಲಿ ಇಂತಹ ಮಾತುಗಳು ವಿಘ್ನ ರೂಪ ಆಗುತ್ತದೆ. ನಾನು ದುಃಖ ತೆಗೆದುಕೊಳ್ಳಲೂಬಾರದು. ಕೊಡುವುದಂತೂ ಇಲ್ಲವೇ ಇಲ್ಲ. ಒಳ್ಳೆಯ ವಸ್ತು ಅಲ್ಲ ಎಂದ ಮೇಲೆ ಕಸವನ್ನು ತೆಗೆದುಕೊಂಡು ಏಕೆ ಜಮಾ ಮಾಡಿಕೊಳ್ಳುತ್ತೀರಿ? ದುಃಖ ತೆಗೆದುಕೊಂಡಿರಿ, ಕಸ ಜಮಾ ಆಯಿತು, ಹಾಗಾದರೆ ಕಸದಿಂದ ಏನು ಹುಟ್ಟುತ್ತದೆ. ಪಾಪದ ಅಂಶ ರೂಪಿ ಕೀಟಾಣುಗಳು. ಈಗ ದೊಡ್ಡ ಪಾಪಗಳನ್ನಂತೂ ಮಾಡುವುದಿಲ್ಲವಲ್ಲವೇ. ಈಗ ಪಾಪದ ಅಂಶ ಉಳಿದಿದೆ ಆದರೆ ಅಂಶವೂ ಇರಬಾರದು. ಕೆಲವು ಮಕ್ಕಳು ಬಹಳ ಮಧುರ ಮಧುರವಾದ ಮಾತುಗಳನ್ನು ಹೇಳುತ್ತಾರೆ. ಆತ್ಮಿಕ ವಾರ್ತಾಲಾಪವನ್ನು ಎಲ್ಲರೂ ಮಾಡುತ್ತೀರಲ್ಲವೇ? ಒಂದು ಸ್ಲೋಗನ್ ಅಂತೂ ಎಲ್ಲರಿಗೂ ಪಕ್ಕಾ ಆಗಿಬಿಟ್ಟಿದೆ. ಇಷ್ಟ ಇರಲಿಲ್ಲ. ಆದರೂ ಆಗಿಬಿಟ್ಟಿತು... ನೀವು ಇಷ್ಟ ಪಡದಿದ್ದರೆ ಇನ್ನು ಯಾರು ಇಷ್ಟ ಪಟ್ಟಿದ್ದರು? ಆಗಿಬಿಟ್ಟಿತು ಎಂದು ಹೇಳುತ್ತೀರಿ! ಇನ್ಯಾವುದಾದರೂ ಆತ್ಮ ಇದೆಯೇ! ಆಗಬಾರದು ಆದರೆ ಆಗುತ್ತದೆ - ಇದನ್ನು ಯಾರು ಹೇಳುತ್ತಾರೆ. ಅನ್ಯ ಯಾವುದಾದರೂ ಆತ್ಮ ಹೇಳುತ್ತದೊ ಅಥವಾ ನೀವು ಹೇಳುತ್ತೀರೊ. ಆದ್ದರಿಂದ ಇಂತಹ ಮಾತುಗಳಿಂದ ತಪಸ್ಸನ್ನು ಸಿದ್ಧ ಮಾಡಲು ಸಾಧ್ಯವಿಲ್ಲ. ಯಾವುದು ಆಗಬಾರದು, ಯಾವುದನ್ನು ಮಾಡಬಾರದು ಅದು ಆಗದೇ ಇರುವುದೇ ಪುಣ್ಯಾತರ ಚಿಹ್ನೆಯಾಗಿದೆ. ಬಾಪ್‌ದಾದಾರವರ ಬಳಿ ನಿತ್ಯವೂ ಮಕ್ಕಳ ಇಂತಹ ಅನೇಕ ಕಥೆಗಳು ಬರುತ್ತವೆ. ಹೇಳುವಾಗ ಕೇಳುತ್ತಲೇ ಇರಬೇಕು ಅಷ್ಟು ಅಭಿರುಚಿಯಿಂದ ಕಥೆಗಳನ್ನು ಹೇಳುತ್ತೀರಿ. ಕೆಲವರು ದೊಡ್ಡ ಕಥೆ ಹೇಳುವ ಅಭ್ಯಾಸಿಗಳಾಗಿದ್ದಾರೆ ಕೆಲವರು ಚಿಕ್ಕದನ್ನು ಹೇಳುತ್ತಾರೆ. ಆದರೆ ಕಥೆಗಳನ್ನು ಬಹಳ ಹೇಳುತ್ತಾರೆ. ಇಂದು ಈ ವರ್ಷದ ಅಂತಿಮ ಮಿಲನ ಆಗಿದೆ ಅಲ್ಲವೇ. ಎಲ್ಲರೂ ಮುಳುಗು ಹಾಕಲು ಬಂದಿರುವಿರಿ ಅಲ್ಲವೇ. ಭಕ್ತಿ ಮಾರ್ಗದಲ್ಲಿಯೂ ಮುಳುಗು ಹಾಕುವಾಗ ಒಂದಲ್ಲಾ ಒಂದು ಸಂಕಲ್ಪವನ್ನು ಅವಶ್ಯ ಮಾಡುತ್ತಾರೆ. ಆದ್ದರಿಂದ ತಪಸ್ಯಾ ವರ್ಷದಲ್ಲಿಯೂ ಈ ಸಂಕಲ್ಪ ಮಾಡಿರಿ ಏನೆಂದರೆ ಇಡೀ ದಿನದಲ್ಲಿ ಸಂಕಲ್ಪದ ಮೂಲಕ, ಮಾತಿನ ಮೂಲಕ, ಕರ್ಮದ ಮೂಲಕ ಪುಣ್ಯಾತ್ಯ ಆಗಿ ಪುಣ್ಯ ಮಾಡುತ್ತೇವೆ ಮತ್ತು ಪುಣ್ಯದ ಚಿಹ್ನೆ ಏನೆಂದರೆ ಪುಣ್ಯದ ಪ್ರತ್ಯಕ್ಷ ಫಲವಾಗಿ ಪ್ರತಿಯೊಂದು ಆತ್ಮನ ಆಶೀರ್ವಾದ. ಪ್ರತಿ ಸಂಕಲ್ಪದಲ್ಲಿ ಪುಣ್ಯದ ಖಾತೆ ಜಮಾ ಆಗಬೇಕು. ಮಾತಿನಿಂದ ಆಶೀರ್ವಾದಗಳು ಜಮಾ ಆಗಬೇಕು. ಸಂಬಂಧ ಸಂಪರ್ಕದಲ್ಲಿ ಹೃದಯದಿಂದ ಸಹಯೋಗ ಮತ್ತು ಧನ್ಯವಾದಗಳು ಬರಬೇಕು. - ಇದಕ್ಕೆ ತಪಸ್ಸು ಎಂದು ಹೇಳಲಾಗುತ್ತದೆ. ಇಂತಹ ತಪಸ್ಸೇ ವಿಶ್ವ ಪರಿವರ್ತನೆಯ ಆಧಾರವಾಗಿದೆ. ಪುನಃ ಹೀಗಾಯಿತು ಎಂದು ಕಥೆ ಹೇಳಬೇಡಿ..! ಮೊದಲ ನಂಬರನ ಬಹುಮಾನ ಟೀಚರ್ಸ್ ತೆಗೆದುಕೊಳ್ಳಬೇಕು ಮತ್ತು ಜೊತೆಗೆ ಮಧುಬನ ನಿವಾಸಿ ತೆಗೆದುಕೊಳ್ಳಬೇಕು. ಏಕೆಂದರೆ ಮಧುಬನದ ಅಲೆಗಳು, ಶಿಕ್ಷಕಿಯರ ಅಲೆಗಳು ಪ್ರವೃತ್ತಿಯವರೆಗೆ, ಈಶ್ವರೀಯ ವಿದ್ಯಾರ್ಥಿಗಳ ವರೆಗೆ ಸಹಜವಾಗಿ ತಲುಪುತ್ತದೆ. ಆಗ ನೀವೆಲ್ಲರೂ ಮೊದಲ ನಂಬರಿನವರಾಗಿಬಿಡುತ್ತೀರಿ. ಈಗ ನೋಡೋಣ ಯಾರ ಯಾರ ಹೆಸರು ಬಹುಮಾನದಲ್ಲಿ ಬರುತ್ತದೆ. ಶಿಕ್ಷಕಿಯರು ಬರುತ್ತಾರೊ ಅಥವಾ ಮಧುವನ ನಿವಾಸಿಗಳದ್ದು ಬರುತ್ತದೋ ಅಥವಾ ಈಶ್ವರೀಯ ವಿದ್ಯಾರ್ಥಿಗಳದ್ದು ಬರುತ್ತದೋ, ಡಬಲ್ ವಿದೇಶಿಗಳು ತೀವ್ರ ಪುರುಷಾರ್ಥ ಮಾಡುತ್ತಿರುವರು. ಬಾಪ್‌ದಾದಾರವರ ಬಳಿ ಬಹುಮಾನಗಳು ಬಹಳ ಇವೆ. ಬಹುಮಾನಕ್ಕೆ ಕೊರತೆ ಇಲ್ಲ. ಭಂಡಾರ ಭರ್ ಪೂರ್ ಆಗಿದೆ ಒಳ್ಳೆಯದು.

ಎಲ್ಲರೂ ಮೇಳೆಯಲ್ಲಿ ತಲುಪಿರುವಿರಿ ಮೇಳ ಇಷ್ಟ ಆಯಿತೋ ಅಥವಾ ಪರಿಶ್ರಮ ಅನಿಸಿತೋ ಮಳೆಯೂ ಸ್ವಾಗತ ಮಾಡಿತು. ಪ್ರಕೃತಿಗೂ ನಿಮ್ಮ ಮೇಲೆ ಪ್ರೀತಿ ಇದೆ. ಭಯಪಡಲಿಲ್ಲ ತಾನೇ ಬ್ರಹ್ಮ ಭೋಜನ ಚೆನ್ನಾಗಿ ಸಿಕ್ಕಿತಲ್ಲವೇ 63 ಜನ್ಮ ಪೆಟ್ಟು ತಿಂದಿರುವಿರಿ ಈಗ ನೆಲೆ ಸಿಕ್ಕಿತಲ್ಲವೇ, ಮೂರು ಹೆಜ್ಜೆಭೂಮಿ ಸಿಕ್ಕಿತಲ್ಲವೇ? ಇಷ್ಟು ದೊಡ್ಡ ಹಾಲ್ ಕಟ್ಟಲಾಗಿದೆ ಈ ಹಾಲ್‌ನ ಶೋಭೆಯನ್ನು ಹೆಚ್ಚಿಸಿದಿರಿ. ಹಾಲ್ ನ್ನು ಸಫಲ ಮಾಡಿದಿರಿ ಅಲ್ಲವೇ, ಯಾರಿಗೂ ತೊಂದರೆ ಆಗಲಿಲ್ಲ ತಾನೇ, ಆದರೆ ಹಾಗೆ ಮೇಳ ಮಾಡುವುದಲ್ಲ, ರಚನೆಯ ಜೊತೆಗೆ ಸಾಧನೆಗಳೂ ಜೊತೆಯಲ್ಲಿ ಬರುತ್ತದೆ ಒಳ್ಳೆಯದು.

**ಸರ್ವ ಬಾಲಕ ಸೋ ಮಾಲಿಕ ಶ್ರೇಷ್ಠ ಆತ್ಮರಿಗೆ, ಸದಾ ಪ್ರತಿ ಹೆಜ್ಜೆಯಲ್ಲಿ ಪುಣ್ಯದ ಖಾತೆಯನ್ನು ಜಮಾ ಮಾಡಿಕೊಳ್ಳುವ ಪುಣ್ಯ ಆತ್ಮರಿಗೆ, ಸದಾ ಹೃದಯಸಿಂಹಾಸನಾಧಿಕಾರಿ ಮತ್ತು ವಿಶ್ವದ ಸಿಂಹಾಸನಕ್ಕೆ ಅಧಿಕಾರಿ ವಿಶೇಷ ಆತ್ಮರಿಗೆ ಸದಾ ಸುಖ ಕೊಡುವ ಮತ್ತು ಸುಖ ತೆಗೆದುಕೊಳ್ಳುವ ಮಾಸ್ಟರ್ ಸುಖದ ಸಾಗರ ಆತ್ಮರಿಗೆ, ಸದಾ ಖುಷಿಯಲ್ಲಿ ಇರುವಂತಹ ಮತ್ತು ಖುಷಿ ಕೊಡುವಂತಹ ದಾತಾ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಮತ್ತು ನಮಸ್ತೆ,.**

**ದಾದೀಜಿಯವರ ಜೊತೆ:-** ಬಾಪ್‌ದಾದಾರವರು ನೋಡಿದ್ದಾರೆ ಮಹಾರಥಿಗಳು ಹೃದಯದಿಂದ ಎಲ್ಲರನ್ನೂ ಶಕ್ತಿಶಾಲಿ ಮಾಡುವಂತಹ ಸೇವೆಯನ್ನು ಬಹಳ ಚೆನ್ನಾಗಿ ಮಾಡಿರುವರು. ಅದಕ್ಕಾಗಿ ಧನ್ಯವಾದ ಏನು ಹೇಳುವುದು. ಆದರೆ ಖಾತೆಯಲ್ಲಿ ಬಹಳ ಜಮಾ ಆಯಿತು ಬಹಳ ದೊಡ್ಡ ಖಾತೆ ಜಮಾ ಆಯಿತು. ಬಾಪದಾದಾರವರು ಮಹಾವೀರ ಮಕ್ಕಳ ಉಮಂಗ-ಉಲ್ಲಾಸವನ್ನು ನೋಡಿ ಪದಮಕ್ಕಿಂತಲೂ ಹೆಚ್ಚು ಹರ್ಷಿತ ಆಗುತ್ತಾರೆ. ಧೈರ್ಯ ಮಾಡಿದ್ದೀರಿ, ಸಂಘಟನೆ ಸದಾ ಸ್ನೇಹದ ಸೂತ್ರದಲ್ಲಿದೆ ಆದ್ದರಿಂದ ಅದರ ಸಫಲತೆ ಇದೆ. ಸಂಘಟನೆ ಶಕ್ತಿಶಾಲಿಯಾಗಿದೆ ಅಲ್ಲವೇ! ಚಿಕ್ಕ ಮಾಲೆ ಮಜಬೂತ್ ಆಗಿದೆ. ಕಂಕಣ ತಯಾರಾಯಿತು ಅಲ್ಲವೇ ಮಾಲೆ ಆಗಲಿಲ್ಲ, ಕಂಕಣ ಆಯಿತು. ಆದ್ದರಿಂದ ಚಿಕ್ಕ ಮಾಲೆಯನ್ನು ಪೂಜೆ ಮಾಡುತ್ತಾರೆ. ದೊಡ್ಡದು ಚೆನ್ನಾಗಿ ತಯಾರಾಗುತ್ತಿದೆ. ಅದೂ ಸಹ ಆಗಿಬಿಡುತ್ತದೆ. ಆಗಲೇ ಬೇಕು. ದೊಡ್ಡ ಮಾಲೆ ತಯಾರಾಗಿದೆ ಆದರೆ ಮಣಿ ಮಣಿ ಒಂದಾಗಲು ಇನ್ನೂ ಸ್ವಲ್ಪ ಅವಕಾಶ ಇದೆ. ಆದರೆ ಚಿಕ್ಕ ಮಾಲೆ ಚೆನ್ನಾಗಿ ತಯಾರಾಗಿದೆ. ಇದೇ ಮಾಲೆಯ ಕಾರಣದಿಂದ ಸಫಲತೆ ಸಹಜ ಆಗಿದೆ ಮತ್ತು ಸಫಲತೆ ಸದಾ ಮಾಲೆಯ ಮಣಿಯ ಕೊರಳಲ್ಲಿ ಪೋಣಿಸಲಾಗಿದೆ. ವಿಜಯದ ತಿಲಕ ಇದ್ದೇ ಇದೆ. ಬಾಪ್ ದಾದಾ ಖುಷ್ ಆಗಿರುವರು. ನಿಮಿತ್ತ ಅಂತೂ ನೀವಾಗಿರುವಿರಿ ಅಲ್ಲವೇ. ತಂದೆ ಅಂತೂ ಮಾಡಿಸುವವರಾಗಿದ್ದಾರೆ. ಮಾಡುವವರು ಯಾರು! ಮಾಡಲು ನಿಮಿತ್ತ ನೀವಾಗಿರುವಿರಿ, ತಂದೆ ಬೆನ್ನೆಲುಬಾಗಿರುವರು. ಆದ್ದರಿಂದ ಬಹಳ ಒಳ್ಳೆಯ ಪ್ರೀತಿಯ ರೀತಿಯನ್ನು ನಿಭಾಯಿಸಿರುವಿರಿ ಮತ್ತು ಪಾಲನೆಯ ರೀತಿಯನ್ನು ಚೆನ್ನಾಗಿ ನಿಭಾಯಿಸಿರುವಿರಿ ಒಳ್ಳೆಯದು.

ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-04-1991.

**"ಕರ್ಮಾತೀತ ಸ್ಥಿತಿ ಅರ್ಥಾತ್ ಕರ್ಮ ಮತ್ತು ಫಲದ ಸ್ಪರ್ಶದ ಅತೀತ, ಸಂಕಲ್ಪದಲ್ಲೂ ಹಗುರ"**

ಕರ್ಮಾತಿತ ಸ್ಥಿತಿ ಸಮೀಪಕ್ಕೆ ಬರುತ್ತಿದೆಯೇ? ಕರ್ಮವೂ ಸಹ ವೃದ್ಧಿಯನ್ನು ವ್ಯಾಪ್ತಿ ಮಾಡಿಕೊಳ್ಳುತ್ತಿದೆ. ಆದರೆ ಕರ್ಮಾತೀತ ಅರ್ಥಾತ್ ಕರ್ಮದ ಯಾವುದೇ ಬಂಧನದ ಸ್ಪರ್ಶದಿಂದ ಅತೀತ. ಇದೇ ರೀತಿ ಅನುಭವ ಹೆಚ್ಚುತ್ತಿರಲಿ. ಯಾವ ರೀತಿ ನಾನು ಆತ್ಮ ಈ ಶರೀರದ ಮೂಲಕ ಕರ್ಮ ಮಾಡಿದೆ ಅಲ್ಲವೇ, ಅದೇ ರೀತಿ ಅಲಿಪ್ತತೆ ಇರಬೇಕು. ಕಾರ್ಯದ ಸ್ಪರ್ಶ ಮಾಡಬಾರದು ಮತ್ತು ಕಾರ್ಯ ಮಾಡಿದ

ಮೇಲೆ ಅದರ ಪರಿಣಾಮ ಏನಾಯಿತು ಅದರ ಫಲದ ಪ್ರಾಪ್ತಿ ಮಾಡುವುದರಲ್ಲಿಯೂ ಅತೀತ. ಕರ್ಮದ ಫಲ ಅರ್ಥಾತ್ ಯಾವ ಪರಿಣಾಮ ಬರುತ್ತದೆ. ಅದರ ಸ್ಪರ್ಶವೂ ಆಗಬಾರದು, ಸಂಪೂರ್ಣ ಅತೀತೆಯ ಅನುಭವ ಆಗಬೇಕು. ಹೇಗೆಂದರೆ ಬೇರೆ ಯಾರೋ ಮಾಡಿಸಿದರು ನಾನು ಮಾಡಿದೆ. ಯಾರೊ ಮಾಡಿಸಿದರು ನಾನು ನಿಮಿತ್ತ ಆಗಿ ಮಾಡಿದೆ. ಆದರೆ ನಿಮಿತ್ತ ಆಗುವುದರಲ್ಲಿಯೂ ಅತೀತ. ಈ ರೀತಿ ಕರ್ಮಾತೀತ ಸ್ಥಿತಿ ಹೆಚ್ಚುತ್ತಾ ಹೋಗುತ್ತದೆ - ಇಂತಹ ಅನುಭವ ಆಗುತ್ತದೆಯೇ? ಮಹಾರಥಿಗಳ ಸ್ಥಿತಿ ಅನ್ಯರಿಗಿಂತ ಅತೀತ ಮತ್ತು ಪ್ರಿಯ ಎಂದು ಸ್ಪಷ್ಟ ಆಗುತ್ತಿದೆ ಅಲ್ಲವೇ. ಯಾವ ರೀತಿ ಬ್ರಹ್ಮಾ ತಂದೆ ಸ್ಪಷ್ಟ ಆಗಿದ್ದರು. ಅದೇ ರೀತಿ ನಂಬರ್ ವಾರ್ ನೀವು ನಿಮಿತ್ತ ಆತ್ಮರೂ ಸಹ ಸಾಕಾರದಲ್ಲಿ ಸ್ಪಷ್ಟ ಆಗುತ್ತೀರಿ. ಕರ್ಮಾತೀತ ಅರ್ಥಾತ್ ನ್ಯಾರಾ ಮತ್ತು ಪ್ಯಾರಾ. ಕರ್ಮ ನೀವೂ ಮಾಡುತ್ತೀರಿ ಮತ್ತು ಅನ್ಯರೂ ಮಾಡುತ್ತಾರೆ ಆದರೆ ನೀವು ಮಾಡುವುದರಲ್ಲಿ ಅಂತರ ಇದೆ. ಸ್ಥಿತಿಯಲ್ಲಿ ಅಂತರ ಇದೆ. ಏನೆಲ್ಲಾ ಕಳೆಯಿತು ಮತ್ತು ಭಿನ್ನ ಆಗಿಬಿಡುವುದು. ಕರ್ಮ ಮಾಡುವುದು ಮತ್ತು ಅದನ್ನು ಮಾಡಿದ ಮೇಲೆ ಏನೂ ಮಾಡಿಲ್ಲ ಎನ್ನುವ ಅನುಭವ ಆಗಬೇಕು. ಮಾಡಿಸುವವರು ಮಾಡಿಸಿಕೊಂಡರು. ಇಂತಹ ಸ್ಥಿತಿಯ ಅನುಭವ ಮಾಡುತ್ತಿರುವಿರಿ. ಕರ್ಮ ಮಾಡುತ್ತಿದ್ದರೂ ತನುವಿನಿಂದಲೂ ಹಗುರ, ಮನಸ್ಸಿನ ಸ್ಥಿತಿಯಲ್ಲಿಯೂ ಹಗುರ. ಕರ್ಮದ ಪರಿಣಾಮ ಮನಸ್ಸಿನ ಸ್ಥಿತಿಯನ್ನು ಸೆಳೆಯುತ್ತದೆ. ಇಂತಹ ಸ್ಥಿತಿ ಇದೆಯೇ? ಎಷ್ಟು ಕಾರ್ಯ ಹೆಚ್ಚುತ್ತದೆ ಅಷ್ಟು ಹಗುರತೆಯೂ ಹೆಚ್ಚುವುದು. ಕರ್ಮ ತನ್ನ ಕಡೆ ಆಕರ್ಷಿತ ಮಾಡುವುದಿಲ್ಲ. ಆದರೆ ಮಾಲೀಕರಾಗಿ ಕರ್ಮ ಮಾಡಿಸುವವರು ಮಾಡಿಸುತ್ತಿರುವರು ಮತ್ತು ನಿಮಿತ್ತ ಮಾಡುವವರು ನಿಮಿತ್ತ ಆಗಿ ಮಾಡುತ್ತಿರುವರು.

ಆತ್ಮದ ಹಗುರತೆಯ ಚಿಹ್ನೆ ಆಗಿದೆ -ಆತ್ಮದ ವಿಶೇಷ ಶಕ್ತಿಗಳೇನಿವೆ ಮನಸ್ಸು, ಬುದ್ಧಿ, ಸಂಸ್ಕಾರ, ಇವು ಮೂರೂ ಈ ರೀತಿ ಹಗುರ ಆಗುವುದು. ಸಂಕಲ್ಪವೂ ಸಹ ಪೂರ್ಣ ಹಗುರ ಸ್ಥಿತಿಯ ಅನುಭವ ಮಾಡಿಸುವುದು. ಬುದ್ಧಿಯ ನಿರ್ಣಯ ಶಕ್ತಿಯೂ ಯಾವ ತರಹ ನಿರ್ಣಯ ಮಾಡುವುದೆಂದರೆ ಏನೂ ಮಾಡಿಯೇ ಇಲ್ಲ ಎನ್ನುವಂತೆ. ಮತ್ತು ಯಾವುದೇ ಸಂಸ್ಕಾರ ತನ್ನ ಕಡೆ ಆಕರ್ಷಿತ ಮಾಡುವುದಿಲ್ಲ. ತಂದೆಯ ಸಂಸ್ಕಾರ ಕೆಲಸ ಮಾಡುತ್ತಿದೆ ಎನಿಸುವುದು. ಈ ಮನಸ್ಸು-ಬುದ್ಧಿ-ಸಂಸ್ಕಾರ ಸೂಕ್ಷ್ಮ ಶಕ್ತಿಗಳೇನಿವೆ ಮೂರರಲ್ಲಿಯೂ ಹಗುರ ಅನುಭವ ಮಾಡುವಿರಿ. ತಂದೆ ಹೇಗೊ ಹಾಗೆ ಮಕ್ಕಳು ಅತೀತ ಮತ್ತು ಅತಿಪ್ರಿಯರಾಗಿದ್ದಾರೆ ಎನ್ನುವ ಮಾತು ಎಲ್ಲರ ಮನದಿಂದ, ಮುಖದಿಂದ ಸ್ವತಃ ಬರುವುದು. ಏಕೆಂದರೆ ದಿನಕಳೆದಂತೆ ಹೊರಗಿನ ವಾತಾವರಣ, ಭಾರ ಆಗುವುದು. ಹೊರಗಿನ ವಾತಾವರಣ ಭಾರ ಆದಷ್ಟು ಅನನ್ಯ ಮಕ್ಕಳ ಸಂಕಲ್ಪ, ಕರ್ಮ, ಸಂಬಂಧ ಹಗುರ ಆಗುವುದು ಮತ್ತು ಈ ಹಗುರತೆಯ ಕಾರಣದಿಂದ ಎಲ್ಲಾ ಕಾರ್ಯಗಳೂ ಹಗುರವಾಗಿ ನಡೆಯುವುದು. ವಾಯುಮಂಡಲ ತಮೋಪ್ರಧಾನ ಆಗಿರುವ ಕಾರಣ ಇನ್ನೂ ಅನ್ಯ ಅನ್ಯ ಪ್ರಕಾರದಿಂದ ಭಾರೀತನದ ಅನುಭವ ಆಗುವುದು. ಪ್ರಕೃತಿಯದು ಸಹ ಭಾರೀತನ ಆಗುವುದು. ಮನುಷ್ಯಾತ್ಮರ ವೃತ್ತಿಯ ಭಾರೀತನವೂ ಇರುವದು. ಇದರಿಂದ ಸಹ ಬಹಳ ಹಗುರತನವೂ ಸಹ ಅನ್ಯರಿಗೂ ಹಗುರತನದ ಅನುಭವ ಮಾಡಿಸುವುದು. ಒಳ್ಳೆಯದು ಎಲ್ಲವೂ ಸರಿಯಾಗಿ ನಡೆಯುತ್ತಿದೆ. ಅಲ್ಲವೇ, ಕಾರ್ಯವ್ಯವಹಾರದ ಪ್ರಭಾವ ನಿಮ್ಮ ಮೇಲೆ ಆಗಬಾರದು. ನಿಮ್ಮ ಹಗುರತೆಯ ಸ್ಥಿತಿಯ ಪ್ರಭಾವ, ನೀವು ಏನೆಲ್ಲಾ ಮಾಡುತ್ತೀರಿ, ಕೇಳುತ್ತೀರಿ, ಕಾರ್ಯ ವ್ಯವಹಾರದ ಮೇಲೆ ಪ್ರಭಾವ ಆಗುತ್ತದೆ. ಕಾರ್ಯದ ಏರುಪೇರಿನ ಪ್ರಭಾವ ನಿಮ್ಮ ಮೇಲೆ ಆಗುವುದಿಲ್ಲ. ಅಚಲ ಸ್ಥಿತಿ ಕಾರ್ಯವನ್ನೂ ಅಚಲ ಮಾಡುತ್ತದೆ. ಎಲ್ಲಾ ರೀತಿಯಲ್ಲಿಯೂ ಅಸಂಭವ ಕಾರ್ಯ ಸಂಭವ ಮತ್ತು ಸಹಜ ಆಗುತ್ತಿದೆ ಮತ್ತು ಆಗುತ್ತಿರುತ್ತದೆ. ಒಳ್ಳೆಯದು.

ರಿವೈಸ್ ಕೋರ್ಸ್ 10-04-1991.

***ಹೃದಯ ಸಿಂಹಾಸನಾಧಿಕಾರಿ ಮತ್ತು ವಿಶ್ವಸಿಂಹಾಸನಾಧಿಕಾರಿಯಾಗಲು ಸುಖ ಕೊಡಿ ಮತ್ತು ಸುಖ ಪಡೆಯಿರಿ.***

ನೀವೆಲ್ಲರೂ ಒಂದು ಸ್ಲೋಗನ್ ಹೇಳುತ್ತೀರಿ ಮತ್ತು ಬರೆದು ಸಹ ಹಾಕುತ್ತೀರಿ ಅದಾಗಿದೆ **"ಸುಖ ಕೊಡಿ ಮತ್ತು ಸುಖ ಪಡೆಯಿರಿ, ದುಃಖ ಕೊಡಬೇಡಿ & ದುಃಖವನ್ನು ತೆಗೆದುಕೊಳ್ಳಬೇಡಿ"** ಈ ಸ್ಲೋಗನ್ ಪಕ್ಕಾ ಆಗಿದೆಯೇ? ಹಾಗಾದರೆ ಪರಿಣಾಮದಲ್ಲಿ ನೋಡಿದ್ದೇನು? ದುಃಖ ಕೊಡಬೇಡಿ ಇದರ ಕಡೆ ಹೆಚ್ಚಿನವರ ಗಮನ ಇದೆ ಆದರೆ ಅರ್ಧ ಸ್ಲೋಗನ್ ಸರಿಯಾಗಿದೆ. ಕೊಡುವುದರ ಬಗ್ಗೆ ವಿಚಾರ ಮಾಡುತ್ತೀರಿ ಕೊಡಬಾರದು ಎಂದು ಆದರೆ ತೆಗೆದುಕೊಳ್ಳುವಾಗ ಹೇಳುತ್ತೀರಿ ಅವರು ಕೊಟ್ಟರು ಆದ್ದರಿಂದ ಹೀಗಾಯಿತು. ಇವರು ಹೀಗೆ ಹೇಳಿದರು ಅದರಿಂದ ಹೀಗಾಯಿತು ಈ ರೀತಿ ನಿರ್ಣಯಗಳನ್ನು ಕೊಡುತ್ತೀರಿ ಅಲ್ಲವೇ. ನಿಮ್ಮ ವಕೀಲ ನೀವೇ ಆಗಿ ನಿಮ್ಮ ಕೇಸ್ ನಲ್ಲಿ ನೀವೇ ವಾದಿಸುತ್ತೀರಿ ಆದ್ದರಿಂದ ಅರ್ಧ ಸ್ಲೋಗನ್ನ ಕಡೆ ಗಮನ ಸರಿಯಾಗಿದೆ ಅದನ್ನು ಅಂಡರ್ ಲೈನ್ ಕೂಡ ಮಾಡಿಕೊಳ್ಳಬೇಕು. ಆದರೂ ಅರ್ಧ ಸ್ಲೋಗನ್ನ ಕಡೆ ಗಮನ ಇದೆ ಇನ್ನರ್ಧ ಸ್ಲೋಗನ್ ನ ಕಡೆ ನಾಮ ಮಾತ್ರಕ್ಕೆ ಗಮನವಿದೆ ಅವರು ಕೊಟ್ಟರೂ ಸರಿ ಆದರೆ ನೀವೇಕೆ ತೆಗೆದುಕೊಂಡಿದ್ದೀರಿ ತೆಗೆದುಕೊಳ್ಳಲು ಯಾರು ಹೇಳಿದರು ದುಃಖವನ್ನು ತೆಗೆದುಕೊಳ್ಳಿರಿ ದುಃಖದಿಂದ ಜೋಳಿಗೆಯನ್ನು ತುಂಬಿಕೊಳ್ಳಿ ಎನ್ನುವುದು ತಂದೆಯ ಶ್ರೀಮತವಾಗಿದೆಯೇನು? ದುಃಖವನ್ನು ಕೊಡಬೇಡಿ ಮತ್ತು ತೆಗೆದುಕೊಳ್ಳಬೇಡಿ ಆಗ ಪುಣ್ಯಾತ್ಮ ಆಗುವಿರಿ, ತಪಸ್ವಿಯಾಗುವಿರಿ. ತಪಸ್ವಿ ಅರ್ಥಾತ್ ಪರಿವರ್ತನೆ ಆದ್ದರಿಂದ ಅವರ ದುಃಖವನ್ನು ನೀವು ಸುಖದ ರೂಪದಲ್ಲಿ ಸ್ವೀಕಾರ ಮಾಡಿರಿ. ಪರಿವರ್ತನೆ ಮಾಡಿಕೊಳ್ಳಿ ಆಗ ತಪಸ್ವಿ ಎಂದು ಹೇಳುತ್ತಾರೆ. ಗ್ಲಾನಿಯನ್ನು ಪ್ರಶಂಸೆ ಎಂದು ತಿಳಿಯಿರಿ. ಗ್ಲಾನಿ ಮಾಡುವ ಅಥವಾ ದುಃಖವನ್ನು ಕೊಡುವವರನ್ನು ಕೂಡ ಗ್ಲಾನಿಯ ದೃಷ್ಟಿಯಿಂದಲ್ಲ ದಯಾಹೃದಯಿ, ದಯಾದೃಷ್ಟಿಯಿಂದ ನೋಡಿ ಮತ್ತು ಹೃದಯದಿಂದ ಆಲಿಂಗನ ಮಾಡಿಕೊಳ್ಳಿ. ಅವರು ನಿಂದಿಸಿದರೆ ನೀವು ಅವರ ಮೇಲೆ ಹೂಗಳನ್ನು ಚೆಲ್ಲಿರಿ ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯದಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ**.

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸ್ವಯಂ ಮತ್ತು ವಿಶ್ವಕ್ಕೆ ಮಾಲೀಕನು.

2. ನನ್ನನ್ನು ನಾನು ಡಬಲ್ ನಶೆ ಅರ್ಥಾಥ್ ಅವಿನಾಶಿ ಆತ್ಮಿಕ ಖುಷಿ ಮತ್ತು ನಾನು ವಿಶ್ವದಲ್ಲಿರುವ ಅದೃಷ್ಟವಂತವಾದ ಆತ್ಮನು ಎಂದು ಅನುಭವ ಮಾಡಿಕೊಂಡಿದ್ದೇನೆ.

3. ನಾನು ಖುಷಿಯಾಗಿ ಇರುತ್ತಾ ಖುಷಿಯ ಆಹಾರವನ್ನು ತಿನ್ನುತ್ತಾ ಸಂತೋಷವೆಂಬ ಉಯ್ಯಾಲೆಯಲ್ಲಿ ತೂಗುತ್ತಾ ಬ್ರಾಹ್ಮಣ ಜೀವನವನ್ನು ಕಳೆಯುತ್ತಿದ್ದೇನೆ.

4. ನಾನು ಮನಸ್ಸಿನಿಂದ ಪುಣ್ಯಕರ್ಮ ಅರ್ಥಾತ್ ಅವಸರ ಸಮಯದಲ್ಲಿ ಯಾರಿಗೆ ಬೇಕಾದರೂ ಸಹಯೋಗಿ ಆಗುವುದು ಅರ್ಥಾಥ್ ಕರ್ಮದಲ್ಲಿ ಬಂದು ಪುಣ್ಯಕರ್ಮವನ್ನು ಮಾಡಿ ಅವರ ಮನಸ್ಸಿನ ಆಶೀರ್ವಾದಗಳನ್ನು ಗುಪ್ತ ರೂಪದಲ್ಲಿ ಜಮಾ ಮಾಡಿಕೊಂಡಿರುವ ಪುಣ್ಯಾತ್ಮ.

6. ನಾನು ಪರಮಾತ್ಮ ಮತ್ತು ಸರ್ವಾತ್ಮರ ಆಶೀರ್ವಾದಗಳನ್ನು ಪ್ರತ್ಯಕ್ಷ ರೂಪದಲ್ಲಿ ಪಡೆದಿದ್ದೇನೆ.

7. ನಾನು ಲಭಿಸಿರುವ ಪ್ರಾಪ್ತಿಯ ಆಧಾರದಿಂದ ಅಭಿಮಾನ ಮತ್ತು ಅವಮಾನಕ್ಕೆ ಅತೀತವಾಗಿ ನಿಶ್ಚಿಂತ ಚಕ್ರವರ್ತಿಯಾಗಿ ಮುಖದಲ್ಲಿ ಸಂತುಷ್ಟತೆ ಮತ್ತು ಪ್ರಸನ್ನತೆಯ ಹೊಳಪನ್ನು ಇಟ್ಟುಕೊಂಡಿರುವ ಪುಣ್ಯಾತ್ಮ.

8. ನಾನು ನನ್ನ ಪುಣ್ಯದ ಶಕ್ತಿಯಿಂದ ಪ್ರತಿಸಂಕಲ್ಪ, ಪ್ರತಿ ಸಮಯ, ಪ್ರತಿ ಪರಿಸ್ಥಿತಿಯನ್ನು, ಪ್ರತಿ ಕರ್ಮವನ್ನು ಸಫಲ ಮಾಡಿಕೊಂಡು ಪುಣ್ಯದ ಖಾತೆಯನ್ನು ಜಮಾ ಮಾಡಿಕೊಂಡಿರುವ ವಿಶ್ವ ರಾಜ್ಯ ಸಿಂಹಾಸನಾಧಿಕಾರಿ.

9. ನಾನು ಎಲ್ಲರಿಗೂ ಸುಖವನ್ನು ಕೊಟ್ಟಿದ್ದೇನೆ ಮತ್ತು ಸುಖವನ್ನೇ ಪಡೆದಿದ್ದೇನೆ

10. ನಾನು ನಿಂದಿಸುವವರ ಮೇಲೆ ಕೂಡ ಹೂವನ್ನು ಹಾಕಿ ದುಃಖ ಕೊಡುವ ಆತ್ಮರನ್ನು ದಯಾ ಹೃದಯಯಾಗಿ, ದಯಾ ದೃಷ್ಟಿಯಿಂದ ನೋಡಿ ಗ್ಲಾನಿ ಮಾಡುವವರನ್ನು ಕೂಡ ಮನಸ್ಸಿನಿಂದ ಆಲಿಂಗನ ಮಾಡಿಕೊಂಡು ಪುಣ್ಯ ಖಾತೆಯನ್ನು ಜಮಾ ಮಾಡಿಕೊಂಡಿರುವ ಜಗನ್ಮಾತೆಯ ಸ್ವರೂಪ.

11. ನನ್ನ ಆಲೋಚನಾ ತರಂಗಗಳು ಪ್ರವೃತ್ತಿಯವರ ವರೆಗೆ ಮತ್ತು ಈಶ್ವರೀಯ ವಿದ್ಯಾರ್ಥಿಗಳವರೆಗೂ ಸಹಜವಾಗಿ ತಲುಪುತ್ತವೆ.